**ದಿನಾಂಕ:22-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಎದುರುದಾರರ ಪರ ಶ್ರೀ. ಎಂ.ಜಿ. ವಕೀಲರಿಂದಃ-**

ಈ ಪ್ರಕರಣದಲ್ಲಿರುವ ಆಸ್ತಿ ನನ್ನ ಮಾವ ಚಿಕ್ಕಮುತ್ತಪ್ಪನಿಗೆ ಸೇರಿದ್ದು ಇರುತ್ತದೆ. ತಿಮ್ಮಯ್ಯ ನನ್ನ ಗಂಡ. ಚಿಕ್ಕಮುತ್ತಪ್ಪ ಮೃತಪಟ್ಟು ಸುಮಾರು 14 ವರ್ಷ ಆಗಿದೆ. ಚಿಕ್ಕಮುತ್ತಪ್ಪನಿಗೆ ಒಬ್ಬಳೇ ಹೆಂಡತಿ ಅಕ್ಕಜ್ಜಮ್ಮ ಮತ್ತು ಇಬ್ಬರು ಮಕ್ಕಳು. ಅವರೆಂದರೆ ಮುನಿಯಪ್ಪ ಮತ್ತು ತಿಮ್ಮಯ್ಯ ಇರುತ್ತಾರೆ. ಅಕ್ಕಜ್ಜಮ್ಮ ಈಗ ಜೀವಂತ ಇಲ್ಲ. ಅಕ್ಕಜ್ಜಮ್ಮನವರ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುವುದಿಲ್ಲ. ಮುನಿಯಪ್ಪ ಮೃತಪಟ್ಟ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ಮುನಿಯಪ್ಪನಿಗೆ ಒಬ್ಬಳೇ ಹೆಂಡತಿ ಒಬ್ಬಳೇ ಹೆಂಡತಿ ಮುನಿಯಮ್ಮ ಮತ್ತು ಒಬ್ಬರೇ ಮಗಳು ಭಾಗ್ಯ ಇರುತ್ತಾರೆ. ಅವರಿಗೆ ಗಂಡು ಮಕ್ಕಳು ಇಲ್ಲ. ನನಗೆ ನಿ.ಪಿ.1 ರಂತೆ ಅಧಿಕಾರ ಪತ್ರ ನೀಡಿದವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬಹುದು. ನನಗೆ ಈ ಪ್ರಕರಣದ ಬಗ್ಗೆ ವೈಯಕ್ತಿಕ ಮಾಹಿತಿ ಇದೆ. ಆಸ್ತಿ ತೋಟಿ ಇನಾಮತಿ ಭೂಮಿ ಇದ್ದು ಅದು ಮಂಜೂರಾದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೇನೆ. ನಮ್ಮ ನಡುವೆ ಆದ ಪ್ರಕರಣದಲ್ಲಿ ಬಿಡಿಎ ಪಕ್ಷಕಾರರಾಗಿಲ್ಲ ಎನ್ನುವುದು ನಿಜ. ಈ ಪ್ರಕರಣದಲ್ಲಿರುವ ಆಸ್ತಿಯ ಬಗ್ಗೆ ನಮಗೆ ಯಾವುದೇ ಹಕ್ಕು ಇಲ್ಲ ಎನ್ನುವುದು ಸರಿ ಅಲ್ಲ. ಪ್ರಕರಣದಲ್ಲಿರುವ ಪರಿಹಾರ ಪಡೆಯಲು ನಾವು ಅರ್ಹರಲ್ಲ ಎನ್ನುವುದು ಸರಿ ಅಲ್ಲ.

**ಉಳಿದ ಕ್ಲೇಮುದಾರರು ಗೈರುಹಾಜರಿದ್ದ ಕಾರಣ ಅವರ ಪರ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಪದ್ಮ ಪ್ರಸಾದ್ )**
**2 ನೇ ಅಪರ ನಗರ ಸಿವಿಲ್ ಮತ್ತು**
**ವಿಶೇಷ ನ್ಯಾಯಾಧೀಶರು, ಬೆಂಗಳೂರು ನಗರ.**